**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 5/2021**

| | | | |
|---|---|---|---|
| **ಹೆಸರು** | **:** | **ಗುರುಲಿಂಗಪ್ಪ** | **ದೋ.ಸಾ. 7** |
| **ತಂದೆಯ ಹೆಸರು** | **:** | **ನಾಗಣ್ಣ** | **ಪ್ರಾ.ಸಾ. 5** |
| **ವಯಸ್ಸು** | **:** | **25 ವರ್ಷ** | **ದಿನಾಂಕಃ 19-03-2024** |
| **ಉದ್ಯೋಗ** | **:** | **ಖಾಸಗಿ ಶಾಲೆ ಶಿಕ್ಷಕ** | |
| **ವಾಸಸ್ಥಳ** | **:** | **ಮೋಘಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ನನ್ನ ಅಣ್ಣ.

ಈ ಪ್ರಕರಣದ ಆರೋಪಿ ಶಶಿಕಾಂತ ನನಗೆ ಗೊತ್ತಿಲ್ಲ.

ನನ್ನ ಅಕ್ಕ ಮಲ್ಲಮ್ಮ ಈಗ್ಗೆ 4-5 ವರ್ಷಗಳ ಹಿಂದೆ ಚಿಂಚೋಳಿ ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ ಕೆಲಸ ಮಾಡುತ್ತಿದ್ದಳು. ದಿನಾಂಕ 27-08-2019 ರಂದು ನಾನು ಮತ್ತು ನನ್ನ ಅಣ್ಣ ಚಾಸಾ-1 ರವರು ಇಟಗಿ ಗ್ರಾಮಕ್ಕೆ ಕೆಲಸ ನಿಮಿತ್ತ ಬಂದಿದ್ದು ಕತ್ತಲಾಗಿದ್ದರಿಂದ ಚಿಂಚೋಳಿಯಲ್ಲಿರುವ ನಮ್ಮ ಅಕ್ಕನ ಮನೆಯಲ್ಲಿ ಉಳಿದು ಬೆಳಿಗ್ಗೆ ಹೋಗೋಣ ಎಂದು ಅಂದುಕೊಂಡು ಚಂದಾಪೂರದ ಕಡೆಗೆ ಬೈಕನಲ್ಲಿ ಹೋಗುತ್ತಿದ್ದಾಗ ರಾತ್ರಿ 10-00 ಗಂಟೆ ಸುಮಾರಿಗೆ ಗಾಂಧಿ ಚೌಕದ ಬಳಿ ಇದ್ದ ಆರೋಪಿ ಶಶಿಕಾಂತ ಬೈಕನ್ನು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು, ನಮ್ಮನ್ನು ಹೆದರಿಸಿ ಹಣ ಕೊಡುವಂತೆ ಹೇಳಿದ. ಹಣ ಕೊಡದಿದ್ದರೆ ನೀವು ಊರು ಧಾಡುವುದಿಲ್ಲ ಎಂದು ಬೆದರಿಸಿದ್ದರಿಂದ ಬೇರೆ ದಾರಿ ಕಾಣದೆ ನಾನು ಮತ್ತು ಚಾಸಾ-1 ನಮ್ಮ ಕೈಯಲ್ಲಿದ್ದ 8 ಸಾವಿರ ರೂಪಾಯಿಯನ್ನು ಆರೋಪಿಗೆ ಕೊಟ್ಟೆವು. ನಂತರ ಆರೋಪಿ ನಮ್ಮನ್ನು ಬಿಟ್ಟಿದ್ದರಿಂದ ಗಾಂಧಿ ಚೌಕದ ಬಳಿಯೇ ಇರುವ ನಮ್ಮ ಚಾಸಾ-6 ರವರ ಮನೆಗೆ ಹೋಗಿ ನಡೆದ ವಿಚಾರ ತಿಳಿಸಿದೆವು.

ಸದರಿ ದಿನ ರಾತ್ರಿ ಚಾಸಾ-6 ರವರ ಮನೆಯಲ್ಲೆ ಉಳಿದುಕೊಂಡು ಮರುದಿನ ಚಿಂಚೋಳಿ ಪೊಲೀಸ್ ಠಾಣೆಗೆ ಹೋಗಿ ಆರೋಪಿ ವಿರುದ್ಧ ದೂರು ಕೊಟ್ಟೆವು.

ಪೊಲೀಸರು ಪ್ರಕರಣದ ಬಗ್ಗೆ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ.

ನನ್ನನ್ನು ಮತ್ತು ಚಾಸಾ-1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಬೆದರಿಸಿ ಹಣ ಕಸಿದುಕೊಂಡ ಆರೋಪಿ ಶಶಿಕಾಂತ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದು ಆತನನ್ನು ಮತ್ತೆ ನೋಡಿ ಗುರುತಿಸುತ್ತಿದ್ದೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನಾನು ಮತ್ತು ಚಾಸಾ-1 ರವರು ಹೋಗುತ್ತಿದ್ದ ಬೈಕನ್ನು ತಡೆದು ನಿಲ್ಲಿಸಿದ್ದ ಆರೋಪಿ ನಮಗೆ ರಂಡಿ ಮಕ್ಕಳೆ, ಸೂಳೆ ಮಕ್ಕಳೆ ಎಂದು ಬೈದ ಎಂದರೆ ಸರಿ. ಆರೋಪಿ ಚಾಕು ಮತ್ತು ಬಡಿಗೆ ತೋರಿಸಿ ನಮ್ಮಿಂದ ರೂ.8000/- ಹಣ ಕಸಿದುಕೊಂಡ ಎಂದರೆ ಸರಿ. ಈಗ ನನಗೆ ತೋರಿಸಲಾದ ಬಡಿಗೆ ಮತ್ತು ಚಾಕುವನ್ನೆ ಆರೋಪಿ ನಮಗೆ ತೋರಿಸಿ ಹೆದರಿಸಿದ್ದ ಎಂದರೆ ಸರಿ. ಸಾಕ್ಷಿ ಗುರುತಿಸಿದ್ದ ಬಡಿಗೆಯನ್ನು ಮು.ಮಾ.1 ಎಂದು ಮತ್ತು ಚಾಕುವನ್ನು ಮು.ಮಾ.2 ಎಂದು ಗುರುತಿಸಲಾಯಿತು.

ಮೇಲ್ಕಂಡ ಘಟನೆ ಬಗ್ಗೆ ದಿನಾಂಕ 31-08-2019 ರಂದು ಅಂದರೆ ಘಟನೆ ನಡೆದ ಮೂರು ದಿನಗಳ ಬಳಿಕ ಚಾಸಾ-1 ರವರು ಪೊಲೀಸರಿಗೆ ದೂರು ಕೊಟ್ಟರು ಎಂದರೆ ಸಾಕ್ಷಿ ಘಟನೆ ನಡೆದ ಮರುದಿನವೇ ದೂರು ಕೊಡಲಾಗಿದೆ ಎನ್ನುತ್ತಾರೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಸಂಗತಿಗಳನ್ನು ಮತ್ತು ಮೇಲ್ಕಂಡ ವಿಚಾರಗಳನ್ನು ದಿನಾಂಕ 31-08-2019 ರಂದು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**